## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.144/2024**

**ಪಿರ್ಯಾದಿ** : ರಾಜ್ಯ ಸರ್ಕಾರ,
ಶ್ರೀಮಂಗಲ ಪೋಲೀಸ್ ಠಾಣೆ.

**ವಿರುದ್ದ**

**ಆರೋಪಿ** : 1. ಶ್ರೀ ಕುಪ್ಪಣಮಾಡ ರಾಬಿನ್ ಯಾನೆ
ರಾಬಿನ್ ಸೋಮಣ್ಣ,
ತಂದೆ: ಮುದ್ದಪ್ಪ,
ಪ್ರಾಯ: 32 ವರ್ಷ,
ವಾಸ: ಕಳಕೂರು ಗ್ರಾಮ, ಬಿರುನಾಣಿ,
ಕೊಡಗು.

2. ಶ್ರೀ ಅರುಣ್ ಯಾನೆ ಕೆ.ಕೆ.ವಿಜಯ್‌ಕುಮಾರ್,
ತಂದೆ: ಪೌತಿ ಕಾಳಪ್ಪ,
ಪ್ರಾಯ: 42 ವರ್ಷ,
ವಾಸ: ಬಿರುನಾಣಿ ಗ್ರಾಮ, ಬಿರುನಾಣಿ,
ಕೊಡಗು.

3. ಶ್ರೀ ಕಿರಣ್ ಯಾನೆ ಕೆ.ಕೆ.ವಿನೋದ್,
ಪ್ರಾಯ: 37 ವರ್ಷ,
ವಾಸ: ಬಿರುನಾಣಿ ಗ್ರಾಮ, ಬಿರುನಾಣಿ,
ಕೊಡಗು.

**ಆರೋಪಣೆ**

ಶ್ರೀ ಶ್ರೀನಾಥ್ ಎ,. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:

ದಿನಾಂಕ 17.12.2023ರಂದು ಸಮಯ 10.00 ಗಂಟೆಗೆ ಶ್ರೀಮಂಗಲ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಕಳಕೂರು ಗ್ರಾಮದಲ್ಲಿ ಸಾಕ್ಷಿ 1 ರವೀಂದ್ರ ಕೆ.ಬಿ ರವರ ವಾಸದ ಮನೆಯ ಅಂಗಳಕ್ಕೆ ಆರೋಪಿಗಳಾದ ನೀವುಗಳು ಸಮಾನೋದ್ದೇಶದಿಂದ ಒಂದುಗೂಡಿ ಅಕ್ರಮ ಪ್ರವೇಶ ಮಾಡಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ 34 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲ್ಕಂಡ ವಿಚಾರವಾಗಿ ಆರೋಪಿಗಳಾದ ನೀವುಗಳು ಸಮಾನೋದ್ದೇಶದಿಂದ ಒಂದುಗೂಡಿ ಸಾಕ್ಷಿ 1 ರವರನ್ನು ಅವಾಚ್ಯ ಶಬ್ದಗಳಿಂದ ಬೈದಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34

ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಮೇಲ್ಕಂಡ ವಿಚಾರವಾಗಿ ಆರೋಪಿಗಳಾದ ನೀವುಗಳು ಸಮಾನೋದ್ದೇಶದಿಂದ ಒಂದುಗೂಡಿ 1ನೇ ಆರೋಪಿಯಾದ ನೀವು ತಮ್ಮ ಭಾಪ್ತು ಏರ್ ಗನ್ ನಿಂದ ಆಕಾಶದ ಕಡೆಗೆ ಗುಂಡು ಹಾರಿಸಿ ಸಾಕ್ಷಿ 1 ರವರಿಗೆ ಕೊಲೆ ಬೆದರಿಕೆ ಹಾಕಿರುವ ಕಾರಣ ಭಾರತೀಯ ದಂಡ ಸಂಹಿತೆ ಕಲಂ 506(2) ಸಹವಾಚಕ 34 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

30-4-26.

ಸ್ಥಳ: ಪೊನ್ನಂಪೇಟೆ,
ದಿ:-30-04-2026

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಪೊನ್ನಂಪೇಟೆ.

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.144/2024**

**ಪಿರ್ಯಾದಿ** : ಕರ್ನಾಟಕ ಸರ್ಕಾರ,
ಶ್ರೀಮಂಗಲ ಪೋಲೀಸ್,

**ವಿರುದ್ಧ**

**ಆರೋಪಿ** :1. ಶ್ರೀ ಕುಪ್ಪಣಮಾಡ ರಾಬಿನ್ ಯಾನೆ
ರಾಬಿನ್ ಸೋಮಣ್ಣ,

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತ ನೀಡಿದ ಉತ್ತರಗಳನ್ನು ನನ್ನಿಂದ ದಿ:30.04.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

30-4-26.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟ

**ದಿನಾಂಕ 30.04.2026.**
**ಸ್ಥಳ: ಪೊನ್ನಂಪೇಟೆ.**

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.144/2024**

**ಪಿರ್ಯಾದಿ** : ಕರ್ನಾಟಕ ಸರ್ಕಾರ,
ಶ್ರೀಮಂಗಲ ಪೊಲೀಸ್,

**ವಿರುದ್ಧ**

**ಆರೋಪಿ** :2. ಶ್ರೀ ಅರುಣ್ ಯಾನೆ ಕೆ.ಕೆ.ವಿಜಯ್‌ಕುಮಾರ್,

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತ ನೀಡಿದ ಉತ್ತರಗಳನ್ನು ನನ್ನಿಂದ ದಿ:30.04.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

30.4.26.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟ

**ದಿನಾಂಕ 30.04.2026.**
**ಸ್ಥಳ: ಪೊನ್ನಂಪೇಟೆ.**

## <u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.</u>

**<u>ಸಿ.ಸಿ.ನಂ.144/2024</u>**

**<u>ಪಿರ್ಯಾದಿ</u>** : ಕರ್ನಾಟಕ ಸರ್ಕಾರ,
ಶ್ರೀಮಂಗಲ ಪೋಲೀಸ್,

**ವಿರುದ್ಧ**

**<u>ಆರೋಪಿ</u>** :3. ಶ್ರೀ ಕಿರಣ್ ಯಾನೆ ಕೆ.ಕೆ.ವಿನೋದ್,

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 251ರಡಿ ಆರೋಪಿಯ ಹೇಳಿಕೆ</u>**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತ ನೀಡಿದ ಉತ್ತರಗಳನ್ನು ನನ್ನಿಂದ ದಿ:30.04.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

30.4.26.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟ

**ದಿನಾಂಕ 30.04.2026.**
**ಸ್ಥಳ: ಪೊನ್ನಂಪೇಟೆ.**

K.K.Vinod Kumar